ಸಿ.ಸಿ. ನಂಬರ್‌ಃ **2256/2023**
ಸಿ.ಡಬ್ಲ್ಯೂಃ **1** ಪಿ.ಡಬ್ಲ್ಯೂಃ **1**

ಪ್ರಧಾನ ದಿವಾಣಿ ಹಾಗೂ ಪ್ರಧಾನ ಜೆ.ಎಂ.ಎಫ್‌.ಸಿ. ಧಾರವಾಡ ಇವರ ನ್ಯಾಯಾಲಯದಲ್ಲಿ,

ಧಾರವಾಡ

ಸಿ.ಸಿ. ನಂಬರ್‌ಃ **2256/2023**

| | |
|---|---|
| ಸಾಕ್ಷಿಯ ಹೆಸರು | : ಹಮೀದ ಪಟೇಲ |
| ತಂದೆಯ ಹೆಸರು | : ಮದಾರ ಪಟೇಲ |
| ವಯಸ್ಸು | : 61 ವರ್ಷ |
| ಉದ್ಯೋಗ | : ನಿವೃತ್ತ ಪಿ ಐ |
| ವಾಸಸ್ಥಳ | : ಬಿಜಾಪುರ |

ದಿಃ **16-07-2025** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

ನಾನು ದಿಃ 14-03-2022 ರಿಂದ ದಿಃ22-09-2023 ರವರೆಗೆ ಹುಬ್ಬಳ್ಳಿ ಧಾರವಾಡದ ಸಿ ಸಿ ಬಿ ಯಲ್ಲಿ ಪಿ ಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆನು.

ಈ ಪ್ರಕರಣದಲ್ಲಿ ದಿನಾಂಕ: 22/07/2022 ರಂದು 4.30 ಗಂಟೆಗೆ ನಾನು ಉಪನಗರ ಪೋಲಿಸ್ ಠಾಣೆ ಧಾರವಾಡ ವ್ಯಾಪ್ತಿಯಲ್ಲಿ ಪೆಟ್ರೊಲಿಂಗ್ ಕರ್ತವ್ಯದಲ್ಲಿ ಚಾಸಾ.4 ರಿಂದ 6 ರವರೊಂದಿಗೆ ಮಾಹಿತಿಯನ್ನು ಕಲೆ ಹಾಕುತ್ತಿದ್ದಾಗ ಸದರಿ ಸಮಯದಲ್ಲಿ ಖಚಿತವಾದ ಬಾತ್ಮಿ ಬಂದಿದ್ದು ಏನೆಂದರೆ ಧಾರವಾಡ ಸವದತ್ತಿ ರೋಡ್ ದಲ್ಲಿ ಹಳೇ ಎಪಿಎಮ್ಸಿ ಹತ್ತಿರ ಒಬ್ಬನು ಸೈಕಲ ಮೋಟಾರ್ ಮೇಲೆ ಅಕ್ರಮವಾಗಿ ಸರಾಯಿಗಳನ್ನು ಮಾರಾಟ ಹಾಗೂ ಸಾಗಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಬಂದಿರುತ್ತದೆ. ನಂತರ ಚಾಸಾ.5 ರವರಿಗೆ ಇಬ್ಬರು ಪಂಚರಾದ ಚಾಸಾ.2 ಮತ್ತು 3 ರವರಿಗೆ ಕರೆಯಿಸಿ ಸದರಿ ವಿಷಯವನ್ನು ಅವರಿಗೆ ತಿಳಿಸಿ, ನಂತರ ಅವರು ಪಂಚರಾಗಲು

ಒಪ್ಪಿಕೊಂಡಿರುತ್ತಾರೆ. ನಂತರ ನಾನು ಅವರಿಗೆ ನೋಟಿಸು ಕೊಟ್ಟಿರುತ್ತೇನೆ. ನಂತರ ನಾನು ಹಾಗೂ ಸಿಬ್ಬಂದಿಗಳು ಹಾಗೂ ಪಂಚರು ಇಲಾಖಾ ಜೀಪ್ ದಲ್ಲಿ ಹೊರಟು ಸವದತ್ತಿ ರೋಡ್ ನ ಸ್ವಲ್ಪ ದೂರಿನಲ್ಲಿ ನಿಲ್ಲಿಸಿ, ನಂತರ ನಾವು ಮರೆಯಲ್ಲಿ ನೋಡಲಾಗಿ ಒಬ್ಬನು ಮೋಟಾರ್ ಸೈಕಲ್ ಮೇಲೆ ಹಳೆ ಎಪಿ ಎಮ್ ಸಿ ಹತ್ತಿರ  ನಿಲ್ಲಿಸಿರುತ್ತಾನೆ. ಸದರಿ ವ್ಯಕ್ತಿಯು ಕೈ ಮಾಡಿ ಸಾರ್ವಜನಿಕರಿಗೆ ಕರೆಯುತ್ತಿದ್ದನು. ಆಗ ನಮಗೆ ಸಂಶಯ ಬಂದಿತು. ಹಾಗಾಗಿ ಸದರಿ ವ್ಯಕ್ತಿಯ ಹತ್ತಿರ ನಾವೆಲ್ಲರೂ ಹೋದಾಗ  ಅವನು ಮೋಟಾರ್ ಸೈಕಲ್ ಸಮೇತ ಓಡಲು ಪ್ರಯತ್ನ ಪಟ್ಟಿರುತ್ತಾನೆ. ನಂತರ ಆತನನ್ನು ಹಿಡಿದುಕೊಂಡು ವಿಚಾರಿಸಲಾಗಿ, ಸದರಿಯವನು ತನ್ನ ಹೆಸರು ಬಸವರಾಜ ತಂದೆ ಸತ್ಯಪ್ಪ ಮುಂದಿನಮನಿ ಎಂದು ತಿಳಿಸಿರುತ್ತಾನೆ.

ಸದರಿ ವ್ಯಕ್ತಿಯ ವಸ್ತುಗಳನ್ನು ಪರಿಶೀಲನೆ ಮಾಡಲಾಗಿ ಮದ್ಯವನ್ನು ಮಾರಾಟ ಮಾಡುತ್ತಿರುವ  ಬಗ್ಗೆ ಒಪ್ಪಿಕೊಂಡಿರುತ್ತಾನೆ. ಆಗ ನಾವು ಅವನ ವಶದಲ್ಲಿದ್ದ ಕೈ ಚೀಲದಲ್ಲಿ ಇದ್ದ ವಸ್ತುಗಳನ್ನು ಪರಿಶೀಲನೆ ಮಾಡಲಾಗಿ ಅವನ ಹತ್ತಿರ ಒಂದು ಬಜಾಜ ಬೈಕ್ ಕೆ ಎ 65 ಎಚ್ 3973 ನೇದ್ದು ಇರುತ್ತದೆ. ನಂತರ ಕೈ ಚೀಲದ ಒಳಗಡೆ ಇರುವ ವಸ್ತುಗಳನ್ನು ಪರಿಶೀಲನೆ ಮಾಡಲಾಗಿ ಅದರಲ್ಲಿ 96 ಪ್ಯಾಕೇಟ್ 90 ಎಮ್ ಎಲ್ ದ ಒರಿಜಿನಲ್ ಚಾಯ್ಸ ಟೆಟ್ರಾ ಪ್ಯಾಕೇಟ್ ಗಳು ಹಾಗೂ 180 ಎಮ್ ಎಲ್ ದ  24 ಬಾಟಲ ಬ್ಯಾಗ್ ಪೇಪರ್ ಹಾಗೂ 24 ಮೋಗಿನತೋಷ ವಿಸ್ಕಿ 180 ಎಮ್ ಎಲ್ ಇದ್ದು, 180 ಎಮ್ ಎಲ್ ದ ಆಫೀಸರ್ ಚಾಯ್ಸ ಸ್ಟಾರ್ ಸುಪ್ರಿಮ್ 12 ಟೆಟ್ರಾ ಪ್ಯಾಕ್ ಗಳು ಹಾಗೂ 180 ಎಮ್ ಎಲ್ ದ ಆಫೀಸರ ಚಾಯ್ಸ ಸ್ಪೆಷಲ್ ವಿಸ್ಕಿ ಒಟ್ಟು  12 ಟೆಟ್ರಾ ಪ್ಯಾಕ್ ಗಳು, 180 ಎಮ್ ಎಲ್ ದ ಒಲ್ಡ ಟೆವರಿನ ವಿಸ್ಕಿಯ 12 ಟೆಟ್ರಾ ಪ್ಯಾಕ್ ಗಳು, 180 ಎಮ್ ಎಲ್ ದ ಮ್ಯಾಕಡಾವೆಲ್ ವಿಸ್ಕಿಯ  8 ಟೆಟ್ರಾ ಪ್ಯಾಕ್ ಗಳು, ಎರಡು ಒಲ್ಡ ಮಂಕ್ ಗಳು 180 ಎಮ್ ಎಲ್ ದ ಟೆಟ್ರಾ ಪ್ಯಾಕ್ ಗಳು ಹಾಗೂ ಆರೋಪಿ  ಅಂಗ ಜಡ್ತಿ ಮಾಡಲಾಗಿ ಆತನ ಹತ್ತಿರ 5,520/- ರೂ ಮಾರಾಟ ಮಾಡಿದ ಹಣ ಇತ್ತು.

ಸದರಿ ಟೆಟ್ರಾ ಪ್ಯಾಕೇಟ್ ಗಳ ಪೈಕಿ ಎರೆಡೆರಡು ಟೆಟ್ರಾ ಪ್ಯಾಕಗಳನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ಅದನ್ನು ಹೊಲಿದು, ಉಪನಗರ ಪೊಲೀಸ್ ಠಾಣೆಯ

ಸಿ.ಸಿ. ನಂಬರ್‌: **2256/2023**
ಸಿ.ಡಬ್ಲ್ಯು: **1** ಪಿ.ಡಬ್ಲ್ಯು: **1**

ಸೀಲ್ ನಿಂದ ಸೀಲ್ ಮಾಡಿ ನನ್ನ ಹಾಗೂ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿ ಮತ್ತು ಉಳಿದ ಎಲ್ಲ ಟೆಟ್ರಾ ಪ್ಯಾಕೇಟ್ ಗಳನ್ನು ಕೈಚೀಲದಲ್ಲಿ ಬಿಳಿ ಅರಿಬಿಯಲ್ಲಿ ಸುತ್ತಿ ತಾಬಾಕ್ಕೆ ತೆಗೆದುಕೊಳ್ಳಲಾಯಿತು. ಸದರಿ ಪಂಚನಾಮೆಯನ್ನು 5.00 ರಿಂದ 6.30 ಗಂಟೆಯವರೆಗೆ ಸಂಜೆ ಮಾಡಲಾಯಿತು. ಸಾಕ್ಷಿಯು ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಂತರ ಮುದ್ದೇಮಾಲು, ಆರೋಪಿ ಹಾಗೂ ಪಂಚನಾಮೆಯೊಂದಿಗೆ ಉಪನಗರ ಪೋಲಿಸ ಠಾಣೆಗೆ ಬಂದು ಸ್ವ ಪಿರ್ಯಾದಿಯನ್ನು ಚಾಸಾ.9 ರವರಿಗೆ ನೀಡಿರುತ್ತೇನೆ. ಆರೋಪಿಯ ಹತ್ತಿರ ಯಾವುದೇ ಪರವಾನಿಗೆ ಇರಲಿಲ್ಲ. ಸಾಕ್ಷಿಯು ಪಿರ್ಯಾದನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಗುರುತಿಸುತ್ತಾರೆ. ಮುದ್ದೆ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಮೋಟಾರ್ ಸೈಕಲ್ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ರೂ.5,520/- ನೋಡಿ ಗುರುತಿಸಿದ್ದು ಅದನ್ನು ಮುಮಾ.1 ಎಂದು ಗುರುತಿಸಲಾಯಿತು.

ಮಾನ್ಯ ಸ.ಸ. ಅ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.